


ಸರ್ವಧಾರಿ ಸಂವತ್ಸರ | ಚೈತ್ರ | ಎಪ್ರಿಲ್ ೨೦೦೮ | ಸಂಪುಟ–೨ | ಸಂಚಿಕೆ–೪

ಗುರುವಾಣಿ

# ತಪ್ಪು ಮಾಡಿದವರಾರು?



**ಹೂರಣ**

**ಗುರುವಾಣಿ**
**ಪ್ರಶ್ನೋತ್ತರ**
**ಗೋಮಯದಿಂದ ವಿಭೂತಿ ತಯಾರಿಕೆ**
**ಗೋ ಶಾಲೆಯಲ್ಲವಿದು ಗೋ ಆಲಯ**
**ಮಾಸದ ಗೋವು: ಸಾಹಿವಾಲ್**

ಪ್ರಕಾಶನ: IT4COW ಸಂಘಟನೆ
groups.yahoo.com/group/IT4COW
ಅಂತರಜಾಲ ತಾಣ: vishwagou.org
ಸಂಪರ್ಕ: govishva@gmail.com



ಗೋಹತ್ಯೆ ಮಾಡಿ ಸತ್ತ ಬ್ರಾಹ್ಮಣನೊಬ್ಬನ ವಿಚಾರಣೆ ಯಮಧರ್ಮರಾಯನ ಆಸ್ಥಾನದಲ್ಲಿ ನಡೆಯುತ್ತಿತ್ತು. ಯಮಧರ್ಮ ಬ್ರಾಹ್ಮಣನನ್ನು ಪ್ರಶ್ನಿಸಿದ –"ರೌರವ ನರಕದಲ್ಲಿ ದಾರುಣ ಹಿಂಸೆಯನ್ನು ಅನುಭವಿಸಲು ಕಾರಣವಾಗುವಂತಹ ಗೋಹತ್ಯೆಯ ಪಾತಕವನ್ನೇಕೆ ಎಸಗಿದೆ?"

ಬ್ರಾಹ್ಮಣ ತನ್ನ ಬುದ್ಧಿವಂತಿಕೆಯನ್ನು ಪ್ರದರ್ಶಿಸುತ್ತಾ ಉತ್ತರಿಸಿದ – "ನಾನು ಆ ಗೋವನ್ನು ಕೊಲ್ಲಲೇ ಇಲ್ಲ. ತೇನ ವಿನಾ ತೃಣಮಪಿ ನ ಚಲತಿ. ದೇವರಿಲ್ಲದೇ ಒಂದು ಹುಲ್ಲು ಕಡ್ಡಿಯೂ ಚಲಿಸುವುದಿಲ್ಲ. ಎಲ್ಲವನ್ನೂ ಮಾಡುವವನೂ, ಮಾಡಿಸುವವನೂ ದೇವರೇ ಆಗಿದ್ದಾನೆ. ಮನುಷ್ಯ ನಿಮಿತ್ತ ಮಾತ್ರ ಎಂದು ಶಾಸ್ತ್ರಗಳು ಹೇಳುತ್ತವೆ. ಆದುದರಿಂದ ಈ ಗೋಹತ್ಯೆಯೂ ದೇವರಿಂದ ಆಗಿದ್ದೇ ಹೊರತು ನನ್ನಿಂದಲ್ಲ."

ತನ್ನ ತಪ್ಪನ್ನು ಮುಚ್ಚಿಡಲು ಶಾಸ್ತ್ರಗಳನ್ನು ಉಪಯೋಗಿಸುವ ಆತನ ದುರ್ಬುದ್ಧಿವಂತಿಕೆಗೆ ಮನದಲ್ಲಿಯೇ ಅಚ್ಚರಿಗೊಂಡ ಯಮಧರ್ಮ ಅವನಿಗೊಂದು ಪಾಠವನ್ನು ಕಲಿಸಬೇಕೆಂದುಕೊಂಡ. ಭೂಲೋಕಕ್ಕೆ ಬ್ರಾಹ್ಮಣನನ್ನು ಕರೆದುಕೊಂಡು ಬಂದು ಅವನ ಮನೆಯನ್ನು ತೋರಿಸಿ ಕೇಳಿದ– "ಅಯ್ಯಾ ಬ್ರಾಹ್ಮಣನೇ, ಇಂದ್ರನ ಅರಮನೆಯನ್ನೂ ಮೀರುವಂತಿರುವ ಈ ಭವ್ಯವಾದ ಮನೆಯನ್ನು ಯಾರು ಕಟ್ಟಿಸಿದರು?"

ಬ್ರಾಹ್ಮಣ ಉತ್ತರಿಸಿದ– "ಅದು ನಾನು ಕಟ್ಟಿಸಿದ ಮನೆ". ಯಮಧರ್ಮ ಸ್ವಲ್ಪ ಮುಂದಕ್ಕೆ ಬಂದು ಪ್ರಶ್ನಿಸಿದ– "ಪಕ್ಕದಲ್ಲಿಯೇ ಕಾಣಿಸುತ್ತಿರುವ ಸುಂದರ ಕೊಳ ಯಾರ ಸೃಷ್ಟಿ?" ಬ್ರಾಹ್ಮಣ ಹೆಮ್ಮೆಯಿಂದ ಹೇಳಿದ– "ಅದು ನನ್ನ ಕಲ್ಪನೆಯ ಕೂಸು".

ಯಮಧರ್ಮ ಇನ್ನಷ್ಟು ಮುಂದುವರೆದು ಕೇಳಿದ– "ಫಲಪುಷ್ಪ ಸಮೃದ್ಧವಾದ ಈ ತೋಟವನ್ನು ನೀನು ನಿರ್ಮಿಸಿದೆಯೇ?" ಹೆಮ್ಮೆಯಲ್ಲಿ ಮೈಮರೆತು ಬ್ರಾಹ್ಮಣ ಹೇಳಿದ– "ಹೌದು. ಅದು ನಾನೇ ಮಾಡಿದ ತೋಟ".

ಸ್ವಲ್ಪ ಮುಂದೆ ಸತ್ತು ಬಿದ್ದಿದ್ದ ಗೋವನ್ನು ತೋರಿಸುತ್ತ ಗೋವನ್ನು ತೋರಿಸುತ್ತಾ ಯಮಧರ್ಮ ಕಠೋರ ಸ್ವರದಲ್ಲಿ ಪ್ರಶ್ನಿಸಿದ– "ಹಾಗಿದ್ದರೆ ಈಗ ಹೇಳು, ನಿಜವಾಗಿಯೂ ಈ ಗೋವನ್ನು ಕೊಂದವರು ಯಾರು?" ಬ್ರಾಹ್ಮಣನ ಬಾಯಿ ಕಟ್ಟಿತು. ಮುಖ ಕಪ್ಪಿಟ್ಟಿತು.

ಮುಂದುವರೆದ ಯಮಧರ್ಮ ಹೇಳಿದ– "ನೀನು ಹೇಳಿದಂತೆ ಒಂದು ವೇಳೆ ದೇವರೇ ತಪ್ಪು ಮಾಡಿದ್ದು ಎಂದುಕೊಂಡು ಅವನಿಗೇ ಶಿಕ್ಷೆ ಕೊಡುವುದು ಎಂದು ತೀರ್ಮಾನಿಸಿದರೂ ತಪ್ಪು ನಡೆದುದು ನಿನ್ನ ಮೂಲಕವಾದುದರಿಂದ ಶಿಕ್ಷೆಯನ್ನೂ ನಿನ್ನ ಮೂಲಕವೇ ಕೊಡಬೇಕಲ್ಲವೇ?" ಯಮಧರ್ಮ ಕೊಡುವ ಶಿಕ್ಷೆಯನ್ನು ಅನುಭವಿಸದೇ ಅವನಿಗೆ ಈಗ ಅನ್ಯ ಮಾರ್ಗವೇ ಇರಲಿಲ್ಲ.

ಒಳ್ಳೆಯ ಕಾರ್ಯಗಳು ನಡೆದಾಗ ಸಾಮಾನ್ಯವಾಗಿ ಅದು ನನ್ನಿಂದಾದದ್ದೆಂದು ಹೆಮ್ಮೆಪಟ್ಟುಕೊಳ್ಳುತ್ತೇವೆ. ತಪ್ಪುಗಳು ನಡೆದಾಗ ಅದಕ್ಕೆ ದೇವರನ್ನು ಹೊಣೆ ಮಾಡುತ್ತೇವೆ. ಆಗ ನಮ್ಮ ಬುದ್ಧಿ ವಕೀಲನಾಗಿ ತಪ್ಪನ್ನು ಬೇರೆ ಯಾರ ಮೇಲಾದರೂ ಹಾಕಲು ಇನ್ನಿಲ್ಲದ ಪ್ರಯತ್ನ ನಡೆಸುತ್ತದೆ.

ಒಳಿತಾಗಲೀ, ಕೆಡುಕಾಗಲೀ ಇಂದು ನಾವು ಅನುಭವಿಸುತ್ತಿದ್ದರೆ ಅದಕ್ಕೆ ಇಂದೋ, ಹಿಂದೋ, ಎಂದೋ ನಾವು ಮಾಡಿದ ಶುಭಾಶುಭಕರ್ಮಗಳೇ ಕಾರಣವಾಗಿರುತ್ತವೆ ಎಂಬುದು ಭಾರತೀಯ ಕರ್ಮಸಿದ್ಧಾಂತದ ಸಾರ. ನಾವು ಮಾಡಿದ ತಪ್ಪು ಒಂದಾದರೆ, ಅದನ್ನು ಇನ್ನೊಬ್ಬರ ಮೇಲೆ ಆರೋಪಿಸಲೆತ್ನಿಸುವುದು ಇನ್ನೊಂದು ತಪ್ಪು.

ಹೀಗೆ ತಪ್ಪಿಗೆ ತಪ್ಪು ಸೇರಿ ನಾವು ಅನುಭವಿಸಬೇಕಾದ ರೌರವ ನರಕವನ್ನು ಮಹಾ ರೌರವವನ್ನಾಗಿ ಬೆಳೆಸುತ್ತದೆ.

*ನೀ ಮಾಡಿದಡುಗೆಯನು ನೀನುಣ್ಣಬೇಕು*

*ನೀ ನೆಟ್ಟ ಗಿಡದ ಫಲ ನೀ ಸವಿಯಬೇಕು*

*ನೀ ನೆಟ್ಟ ಮುಳ್ಳು ಗಿಡ ನಿನ್ನ ಕಾಲಡಿಗೇ*

*ಕೂಡಿಟ್ಟ ಪಾಪಗಳು ನಿನ್ನ ಸಂತತಿಗೇ.*

(ಕೃಪೆ: ಕನ್ನಡಪ್ರಭ)

**– ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**
**ಶ್ರೀ ರಾಮಚಂದ್ರಾಪುರ ಮಠ**

## ಪ್ರಶ್ನೋತ್ತರ

ಪ್ರ: ಗೋಮಾಳಗಳು ಎಂದರೇನು? ಅವುಗಳ ಉದ್ದೇಶವೇನು ?

ಉ: ಪುರಾತನ ಕಾಲದಿಂದಲೂ ಭಾರತದಲ್ಲಿ ಹಸುಗಳನ್ನು ಮೇಯಲು ಕಾಡು ಮೆಡುಗಳಿಗೆ ಬಿಡುತ್ತಿದ್ದರು. ಪ್ರತಿಯೊಂದು ಗ್ರಾಮದಲ್ಲಿಯೂ ದನಗಳು ಮುಕ್ತವಾಗಿ ಮೇಯುವುದಕ್ಕಾಗಿಯೇ ಸಾಕಷ್ಟು ಮೇವಿನ ಭೂಮಿಯನ್ನು ಬಿಡಲಾಗುತ್ತಿತ್ತು. ಇವೇ ಗೋಮಾಳಗಳು. ಇದು ಆಯಾ ಗ್ರಾಮದ ಊರೊಟ್ಟಿನ ಭೂಮಿಯಾಗಿರುತ್ತಿತ್ತು. ಈ ಭೂಮಿಯನ್ನು ಬೇರೆ ಉದ್ದೇಶಗಳಿಗೆ ಬಳಸುತ್ತಿರಲಿಲ್ಲ. ಸ್ವಾತಂತ್ರ್ಯಾನಂತರದಲ್ಲಿ ಭೂಮಿಗೆ ಬೇಡಿಕೆ ಹೆಚ್ಚಾದಂತೆ ಗೊಮಾಳದ ಭೂಮಿಯನ್ನು ಪರಭಾರೆ ಮಾಡುವುದೂ ಹೆಚ್ಚಾಗಿದೆ. ಸಹಜವಾಗಿಯೇ ಮೇವಿನ ಕೊರತೆ ದೊಡ್ಡ ಸಮಸ್ಯೆಯಾಗಿದೆ.

ಪ್ರ: ಭಾರತದಲ್ಲಿ ಮೇವಿನ ಕೊರತೆ ಎಷ್ಟಿದೆ ?

ಉ: ತಜ್ಞರ ಪ್ರಕಾರ ಪ್ರತಿ ೫ ಜಾನುವಾರುಗಳಿಗೆ ೧ ಹೆಕ್ಟೇರ್ ಮೇವಿನ ಭೂಮಿ ಇರುವುದು ಅಗತ್ಯ. ಆದರೆ ಇಂದು ೫೦ ಜಾನುವಾರುಗಳಿಗೆ ೧ ಹೆಕ್ಟೇರ್ ಭೂಮಿ ಸಿಗುವುದೂ ಕಷ್ಟವಾಗಿದೆ. ಏನೆಂದು ನಾ ಹೇಳಲಿ? ಮಾನವನಾಸೆಗೆ ಕೊನೆಯೆಲ್ಲಿ? ೧೦ ನೇ ಪಂಚವಾರ್ಷಿಕ ಯೋಜನೆ ವರದಿ ಪ್ರಕಾರ ೨೦೧೦ರ ವೇಳೆಗೆ ಹಸಿರು ಮೇವಿನ ಬೇಡಿಕೆ ೧೦೬ ಕೋಟಿ ಟನ್ ಇದ್ದರೆ ಪೂರೈಕೆ ಕೇವಲ ೪೦ ಕೋಟಿ ಟನ್ ಇರುತ್ತದೆ. ಕೊರತೆ ೬೬ ಕೋಟಿ ಟನ್. ಒಣ ಮೇವಿನ ಬೇಡಿಕೆ ೫೯ ಕೋಟಿ ಟನ್. ಪೂರೈಕೆ ೪೫ ಕೋಟಿ ಟನ್. ಕೊರತೆ ೧೪ ಕೋಟಿ ಟನ್. ತುರ್ತು ಕ್ರಮ ಅಗತ್ಯ.

ಪ್ರ: ಗೋ ಆಧಾರಿತ ಕೃಷಿ ಮಾಡಿದರೆ ನಮ್ಮ ಜನಸಂಖ್ಯೆಗೆ ಆಹಾರ ಒದಗಿಸುವುದು ಸಾಧ್ಯವೇ ?

ಉ: ಈ ಪ್ರಶ್ನೆಯಲ್ಲಿ ೨ ನಂಬಿಕೆಗಳು ಅಡಕವಾಗಿವೆ– ೧)ಜನಸಂಖ್ಯೆ ಬೆಳೆಯುತ್ತಲೇ ಹೋಗುತ್ತದೆ. ೨)ರಾಸಾಯನಿಕ ಕೃಷಿ ಹೆಚ್ಚು ಹೆಚ್ಚು ಆಹಾರ ಉತ್ಪಾದಿಸುತ್ತಲೇ ಹೋಗುತ್ತದೆ. ಎರಡೂ ಸರಿಯಲ್ಲ. ಸಂಪನ್ಮೂಲಕ್ಕೆ ತಕ್ಕಂತೆ ನಮ್ಮ ಜನಸಂಖ್ಯೆಯನ್ನು ನಿಯಂತ್ರಿಸಿಕೊಳ್ಳುವುದು ಅತಿ ಅಗತ್ಯ. ಇದರಲ್ಲಿ ನಾವು ಸೋತಿದ್ದೇವೆ. ರಾಸಾಯನಿಕ ಕೃಷಿಯು ಸಹ ನಿರಂತರವಾಗಿ ಉತ್ಪಾದನೆಯನ್ನು ಹೆಚ್ಚಿಸುವುದಿಲ್ಲ. ಹೆಚ್ಚು ಹೆಚ್ಚು ರಾಸಾಯನಿಕ ಬಳಸಿದಂತೆ ಮಣ್ಣು ದಣಿಯುತ್ತದೆ. ಫಲವತ್ತತೆ ಕಡಿಮೆಯಾಗುತ್ತದೆ. ಜನಗಳಿಗೆ ಸತ್ವರಹಿತ ಆಹಾರ ನೀಡುವುದಕ್ಕಿಂತಲೂ ಸತ್ವಭರಿತ ಆಹಾರ ನೀಡುವುದೂ ಮುಖ್ಯವಲ್ಲವೇ?

– **ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ)

ಆರ್ಥಿಕವಾಗಿ ಗೋವು

## ಗೋಮಯದಿಂದ ವಿಭೂತಿ ತಯಾರಿಕೆ

"ಇಟ್ಟರೆ ಸೆಗಣಿಯಾದೆ, ತಟ್ಟಿದರೆ ಕುರುಳಾದೆ, ಸುಟ್ಟರೆ ನೊಸಲಿಗೆ ವಿಭೂತಿಯಾದೆ". ಗೋಮಯದ ಉಪಯೋಗಗಳನ್ನು ಅದರ ದನಿಯಲ್ಲೇ ಕೇಳಿದಿರಲ್ಲವೇ? ಹೌದು, ಗೋಮಯದಿಂದ ತಯಾರಿಸುವ ಉತ್ಪನ್ನಗಳಲ್ಲಿ ವಿಭೂತಿಯೂ ಒಂದು. "ಕೂಡಲ ಸಂಗನ ಶರಣಗೆ ನೊಸಲ ವಿಭೂತಿಯೆ ಶೃಂಗಾರ" ಎಂದು ಬಸವಣ್ಣನಿಂದ ಶ್ಲಾಘಿಸಲ್ಪಟ್ಟ ವಿಭೂತಿಗೆ ತನ್ನದೇ ಆದ ಪವಿತ್ರ ಸ್ಥಾನವಿದೆ. ಇದನ್ನು ಪೇಟೆಯಿಂದ ಕೊಂಡುಕೊಳ್ಳುವ ಬದಲು ನಾವೇ ಮನೆಯಲ್ಲಿ ತಯಾರಿಸಿಕೊಳ್ಳಬಹುದು.

ಮೊದಲಿಗೆ ಸ್ವಲ್ಪ ಗಟ್ಟಿಯಾದ ಗೋಮಯವನ್ನು (ಸೆಗಣಿ) ತೆಗೆದುಕೊಂಡು ಅದರಿಂದ ಕಸಕಡ್ಡಿಗಳನ್ನು ಬೇರ್ಪಡಿಸಿ ಶುದ್ಧಗೊಳಿಸಬೇಕು. ನಂತರ ಅದನ್ನು ರೊಟ್ಟಿಯಾಕಾರದಲ್ಲಿ ತಟ್ಟಿ ಬಿಸಿಲಿನಲ್ಲಿ ಒಣಗಿಸಬೇಕು. ಇದನ್ನೇ ಬೆರಣಿಯೆನ್ನುತ್ತಾರೆ. ನಂತರ ಒಣಗಿದ ಬೆರಣಿಯನ್ನು ಬೆಂಕಿಯಲ್ಲಿ ಸುಡಬೇಕು.

ದೊರಕಿದ ಪುಡಿಯನ್ನು ಗೋಮೂತ್ರ ಅಥವಾ ನೀರಿನಲ್ಲಿ ಕರಗಿಸಿ, ತೆಳ್ಳಗಿನ ಬಟ್ಟೆಯನ್ನು ಉಪಯೋಗಿಸಿ ಸೋಸಬೇಕು. ಬಂದಂತಹ ಹಿಟ್ಟಿನಂತಹ ಮಿಶ್ರಣವನ್ನು ಸಣ್ಣ–ಸಣ್ಣ ಉಂಡೆಗಳನ್ನಾಗಿ ಮಾಡಿ ಪುನಃ ಬಿಸಿಲಿನಲ್ಲಿ ಒಣಗಿಸಬೇಕು. ನಂತರ ಆ ಉಂಡೆಗಳನ್ನು ಬೆರಣಿಯ ಮಧ್ಯದಲ್ಲಿರಿಸಿ ಪುನಃ ಸುಡಬೇಕು. ನಂತರ ಉಳಿಯುವ ಪುಡಿಯೇ ವಿಭೂತಿ. ಅದನ್ನು ಹಾಗೆಯೇ ಉಪಯೋಗಿಸಬಹುದು ಅಥವಾ ತುಂಬಾ ನುಣುಪಾಗಬೇಕೆಂದರೆ ಜರಡಿ ಹಿಡಿದು ನಂತರ ಉಪಯೋಗಿಸಬಹುದು.

ವಿಭೂತಿಯನ್ನು ಹಣೆಗೆ ಹಚ್ಚಿಕೊಳ್ಳುವುದರಿಂದ ಏಕಾಗ್ರತೆ ಹೆಚ್ಚುತ್ತದೆ ಹಾಗೂ ಕೆಲವು ಚರ್ಮ ರೋಗಗಳನ್ನೂ ತಡೆಗಟ್ಟಬಹುದು.

**–ಶೋಭನಾ ಯರ್ಮುಂಜ**

## ಗೋ ಶಾಲೆಯಲ್ಲವಿದು ಗೋ ಆಲಯ

ಚಿತ್ರದುರ್ಗ ಜಿಲ್ಲೆಯಲ್ಲೇ ಬಹುದೊಡ್ಡ ಕೆರೆಯೆಂಬ ಖ್ಯಾತಿಗೆ ಒಳಗಾಗಿರುವ ಕಾತ್ರಾಳುಕೆರೆಯನ್ನು ಸೀಳಿಕೊಂಡು ಹೋಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ ನೀವು ಸಾಗುತ್ತಿದ್ದರೆ; ಕೆರೆಯ ದಂಡೆಗೇ ಆತುಕೊಂಡಂತೆ ಸಾಲು ಸಾಲು ಹಸುಗಳ ಆಲಯವೊಂದು ನಿಮ್ಮನ್ನು ಆಕರ್ಷಿಸುತ್ತದೆ. ಅದೇ ಆದಿಚುಂಚನಗಿರಿ ಗೋಶಾಲೆ.

ಬರಗಾಲ ಬಡತನ, ಚಿತ್ರದುರ್ಗ ಜಿಲ್ಲೆಗೆ ಹೊಸದಲ್ಲ. ಈ ಭೀಕರತೆಯನ್ನು ಹೇಗೋ ಎದುರಿಸಿ ಬದುಕನ್ನು ನಿಭಾಯಿಸುತ್ತಿದ್ದ ಜನರೀಗ ತಮ್ಮನ್ನೂ ಜಾನುವಾರುಗಳನ್ನು ರಕ್ಷಿಸುವುದು ತುಂಬಾ ಕಷ್ಟ ಎನ್ನಿಸಿದಾಗ ಅನುತ್ಪಾದಕ ಹಾಗೂ ಅನುಪಯುಕ್ತ ಜಾನುವಾರುಗಳನ್ನು ಕಸಾಯಿಖನೆಗೆ ಹೊಡೆಯುವಷ್ಟು ಸ್ಥಿತಿಗೆ ಬಂದು ನಿಂತರು. ಇದು ದುರಾದೃಷ್ಟ ಎನ್ನಬಹುದು. ಅವರನ್ನು ಕೇಳಿಇದು ಅನಿವಾರ್ಯ ಎನ್ನುತ್ತಾರೆ. ಎಲ್ಲೆಂದರಲ್ಲೇ ತಲೆ ಎತ್ತಿ ನಿಂತಿರುವ ಕಸಾಯಿಖಾನೆಗಳು ಮಾತ್ರ ಇಂಥ ರಾಸುಗಳನ್ನು ಸದಾ ಸ್ವಾಗತಿಸುತ್ತವೆ. ಇದನ್ನು ತಡೆಯಲು ಸಾಧ್ಯವೆ?

ಸಾಧ್ಯವೆನ್ನುತ್ತದೆ ನ್ಯಾಯಾಲಯ. ಇದಕ್ಕೆ ಕಾನೂನಿನ ನೆರವು ಒದಗಿಸಿದೆ. ಕೊಲ್ಲಲು ಇದು ಅನಿವಾರ್ಯ, ಅನಾರೋಗ್ಯ ಸ್ಥಿತಿ ತಲುಪಿದೆಯೆನ್ನುವ ವೈದ್ಯರ ಪ್ರಮಾಣ ಪತ್ರವಿದ್ದರೆ ಮಾತ್ರ ಅದನ್ನು ಕಸಾಯಿಖಾನೆಗೆ ಕಳಿಸಬಹುದು. ಪ್ರಮಾಣ ಪತ್ರವಿಲ್ಲದೆ ಕೊಲ್ಲುವುದು ಅಸಿಂಧು. ಎಷ್ಟೊಂದು ಹಸುಗಳಿಗೆ ಇಂಥ ಪ್ರಮಾಣ ಪತ್ರ ನೀಡಲಾಯಿತು?

ವೈದ್ಯರಿಗೇ ಒಂದಕ್ಕಾದರೂ ನೀಡಿರುವ ನೆನಪಾದರೂ ಇದೆಯೇ? ಆದರೆ ಸಾವಿರಾರು ಹಸುಗಳು ನಿತ್ಯ ಮಾರಣ ಹೋಮ.

ಇದನ್ನು ತಡೆಯಲು ಮುಂದೆ ಬಂದ ಮೊದಲ ಕೀರ್ತಿ ಜೈನಧರ್ಮದ ಪ್ರಾಣಿ ಮಿತ್ರಾಲಯ ಸಂಘದವರು. ಜೀವದಯೆ ಬಹುಮುಖ್ಯ. ಅದೇ ಬದುಕಿನ ಗಂತವ್ಯವೆಂದು ಭಾವಿಸಿದವರು ಅವರು. ಅವರಂತೆ ಇನ್ನೂ ಹಲವರು. ಇನ್ನೊಂದು ಹೆಸರು ಆದಿಚುಂಚನಗಿರಿ ಶ್ರೀಗಳದು. ಈಗಾಗಲೇ ಮಂಡ್ಯ, ಚುಂಚನಗಿರಿ, ಮೈಸೂರು, ಬೆಂಗಳೂರುಗಳಿಗೆ ಇಂಥ ಶಾಲೆಯನ್ನು ಆರಂಭಿಸಿದ ಅವರು ಚಿತ್ರದುರ್ಗ ಜಿಲ್ಲೆಗೂ ಕಾಲಿರಿಸಿ ಈ ಗೋಶಾಲೆ ಆರಂಭಿಸಿದರು.

ಸದಾ ನೀರಿನ ಮೂಲ ಹೊಂದಿರುವ ಕಾತ್ರಾಳುಕೆರೆಯ ಸರ್ಕಾರಿ ಭೂಮಿಯ ೨೭ ಎಕರೆ ಲೀಸ್ ಮೇಲೆ ಪಡೆದು, ರೈತರಿಂದ ಇನ್ನೊಂದಿಷ್ಟು ಭೂಮಿಯನ್ನು ಖರೀದಿಸಿ ಗೋಶಾಲೆಯನ್ನು ಶ್ರೀಗಳು ಆರಂಭಿಸಿದರು. ನವೆಂಬರ್ ೧೧, ೨೦೦೬ ರಂದು ಈ ಗೋಶಾಲೆ ಪೂರ್ಣಗೊಂಡು ಆಗಿನ ಮುಖ್ಯಮಂತ್ರಿ ಎಚ್. ಡಿ. ಕುಮಾರ ಸ್ವಾಮಿಯವರಿಂದ ಉದ್ಘಾಟನೆಯಾಯಿತು. ಇಂಥ ಗೋಶಾಲೆಯೊಂದರ ಅನಿವಾರ್ಯತೆ ಇತ್ತೆಂಬ ಪ್ರತೀಕದಂತೆ ಅದರ ಉದ್ಘಾಟನೆಯ ದಿನ ಸ್ಥಳೀಯರು, ಅಕ್ಕಪಕ್ಕದ ಊರಿನ ಸಾವಿರಾರು ಜನರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಹಲವಾರು ಮಠಾಧೀಶರು, ಸಾಹಿತಿಗಳು ಪತ್ರಕರ್ತರು, ಸಚಿವರು –ಮೊದಲಾದವರು ಆಗಮಿಸಿ ಆ ಸ್ಥಳಕ್ಕೆ ಅರ್ಥವತ್ತಾದ ಸಾಕ್ಷಿಯನ್ನು ನೀಡಿ ಈ ಕಾರ್ಯ ಶ್ಲಾಘನೀಯವೆಂದು ಹಾರೈಸಿದರು.

ಇದು ಕೇವಲ ಗೋಶಾಲೆ ಮಾತ್ರವಲ್ಲ ಗೋಆಲಯವೆನ್ನಬಹುದೆನ್ನುವ ಯೋಜನೆಗಳ ಅನುಷ್ಠಾನ ನಡೆಯುತ್ತಿದೆ. ವಿವಿಧ ಜಾತಿಯ ನೂರಾರು ಹಸು, ಎಮ್ಮೆ ಹೋರಿಗಳು– ಹಾಲು ಕೊಡುವ, ನೀಡದೆ ವೃದ್ಧಾಪ್ಯ ಸಮೀಪಿಸಿರುವ ಜಾನುವಾರುಗಳ ರೇಖರೇಖೆಯೇ ಈ ಗೋಶಾಲೆಯ ಪ್ರಮುಖ ಕಾರ್ಯವಾಗಿದೆ. ಸದ್ಯಕ್ಕೆ ಅಲ್ಲಿಂದ ಬರುವ ಹಾಲು, ಮೊಸರು, ಅಲ್ಲಿಯ ನೌಕರರು, ಕರುಗಳ ಪಾಲಿಗೆ ಉತ್ಪಾದನೆಯ ಪ್ರಶ್ನೆಯೇ ಇಲ್ಲ. ಅದರ ಉದ್ದೇಶವೂ ಇಲ್ಲದಿರುವುದರಿಂದ ಅದರ ಚಿಂತೆಯೂ ಇಲ್ಲ.

ಸರ್ಕಾರ ಭೂಮಿ ಮಂಜೂರು ಮಾಡಿ ಆರಂಭಿಕ ಹತ್ತು ಲಕ್ಷ ರೂ.ಗಳನ್ನು ನೆರವಿಗೆ ನೀಡಿರುವುದನ್ನು ಹೊರತುಪಡಿಸಿದರೆ ಉಳಿದ ಖರ್ಚೆಲ್ಲವೂ ಶ್ರೀಮಠದ್ದೆ. ಅಲ್ಲೀಗ ಪ್ರತಿ ತಿಂಗಳೂ ಒಂದು ಲಕ್ಷ ರೂ.ಖರ್ಚು ಬರುತ್ತದೆ. ದನಗಳ ಮೇವು, ಹಿಂಡಿ, ನೌಕರರ ವೇತನ, ವೈದ್ಯರ ವೇತನ, ವಿದ್ಯುತ್ ಬಿಲ್ ಮೊದಲಾದ ಹತ್ತಾರು ಖರ್ಚುಗಳು ದಿನದಿನವೂ ಏರುತ್ತಿವೆ. ಹಾಗೆಯೇ ದನಗಳು ಬರುವ ಸಂಖ್ಯೆಯೂ ಏರುತ್ತಿದೆ, ನೌಕರರ ಸಂಖ್ಯೆ ಸಹ.

ಇದರ ಜೊತೆಯಲ್ಲಿ ಹಸುಗಳ ತ್ಯಾಜ್ಯ ವಸ್ತುಗಳಿಂದ ಪಂಚಗವ್ಯ, ಅಗ್ನಿಹೋತ್ರಿ ಮೊದಲಾದ ವಸ್ತುಗಳ ಉತ್ಪಾದನೆಯ ಯೋಜನೆಯನ್ನು ಹಾಕಿಕೊಂಡು ಉತ್ಪಾದನೆಯ ಕಡೆಯೇ ಗೋಶಾಲೆ ಮುಂದಾಗಿದೆ. ಖಾಲಿ ಇರುವ ಭೂಮಿಯಲ್ಲಿ ಔಷಧಿ ಸಸ್ಯವನ್ನು ಬೆಳೆಸುವ ಪ್ರಯತ್ನ ಕೂಡ ನಡೆದಿದೆ. ಈಗಾಗಲೇ ನೇಪಾಲದಿಂದ ತರಿಸಿರುವ ೧೧ ರುದ್ರಾಕ್ಷಿ ಗಿಡಗಳನ್ನು ನೆಡಲಾಗಿದೆ. ಅಮೃತಬಳ್ಳಿ, ತುಂಬೆ, ಕಸ್ತೂರಿ, ಬಿಲ್ವ ಮೊದಲಾದ ಸಸ್ಯಗಳನ್ನು ಬೆಳೆಯುವ ಪ್ರಯತ್ನ ಮಾಡಲಾಗಿದೆ.

ಗೋಶಾಲೆಯ ಜೊತೆಗೆ ಇದನ್ನು ಪ್ರವಾಸಿಗರ ತಾಣವನ್ನಾಗಿ ಮಾಡುವ ಪ್ರಯತ್ನ ಕೂಡ ನಡೆಯುತ್ತಿದೆ. ದೇವಾಲಯ, ಮಕ್ಕಳ ಆಟದ ಮೈದಾನ, ಸಲಕರಣೆ, ಕುಡಿಯುವ ನೀರು ವ್ಯವಸ್ಥೆ, ಗೋಪೂಜೆಗೆ ಅವಕಾಶ ಮಾಡಲಾಗುತ್ತಿದೆ. ಆಕಳಿನ ಸೆಗಣಿಯನ್ನು ಆಯ್ದು ಒಣಗಿಸಿ, ಸುಟ್ಟು ಪುಡಿ ಮಾಡಿ ಮತ್ತೆ ಕುಟ್ಟಿ ವಿಭೂತಿ ತಯಾರಿಸುವ ಯೋಜನೆ ಈಗ ಕಾರ್ಯರೂಪಕ್ಕೆ ಬರುತ್ತಿದೆ. ಹಾಗೆಯೇ ಔಷಧಿಯುಕ್ತ ಹಾಲಿನ ಗುಣವಿರುವ ರಾಸುಗಳನ್ನು ರಾಷ್ಟ್ರದ ವಿವಿಧ ಭಾಗಗಳಿಂದ ತರಿಸಲಾಗುತ್ತಿದೆ. ಈಗ ಅಂತಹ ಹಸುವೊಂದು ಗೋಶಾಲೆಯಲ್ಲಿದೆ. "ಮಲ್ಲಾರಿಗಿಡ್ಡ" ಎಂದು ಕರೆಯುವ ಈ ಹಸುವಿನ ಹಾಲನ್ನು ದಿನನಿತ್ಯವೂ ಸೇವಿಸಿದರೆ ರಕ್ತದೊತ್ತಡ ಮತ್ತು ಮಧುಮೇಹದಂತಹ ರೋಗವನ್ನು ಸಂಪೂರ್ಣ ನಾಶವನ್ನು, ಹತೋಟಿಯನ್ನು ಮಾಡಬಹುದು. ಇಂಥ ರಾಸುಗಳ ಶೋಧನೆಯನ್ನು ಈ ಗೋಶಾಲೆ ಮಾಡುತ್ತಿದೆ.

ಎಲ್ಲ ಯೋಜನೆಗಳು ಅನುಷ್ಠಾನವಾಗಲು ಇನ್ನೂ ಕೆಲವು ವರ್ಷಗಳಾದರೂ ಆಗಬಹುದು. ಈ ಸಂಬಂಧವಾದ ಕಾರ್ಯಚಟುವಟಿಕೆಗಳಂತೂ ಈಗ ಬಿರುಸಿನಿಂದ ನಡೆಯುತ್ತಿದೆ.

ಗೋಶಾಲೆಯ ಸಂಕಲ್ಪ ಶ್ರೀಗಳದ್ದಾದರೂ ಅದರ ನಿರ್ವಹಣೆಯಲ್ಲಿ ಚಿತ್ರದುರ್ಗದ ಜೈನಮಿತ್ರ ಮಂಡಲಿಯ ಪಾಲೂ ಇದೆ. ಪ್ರತಿನಿತ್ಯದ ಆಗುಹೋಗುಗಳ, ಹಾರೈಕೆಯ ಹೊಣೆಯನ್ನು ಈ ಮಂಡಳಿ ಹೊತ್ತಿರುವುದರ ಜೊತೆಗೆ ಹಣಕಾಸಿನ ನೆರವು ನೀಡುವ ಯೋಜನೆಯನ್ನು ರೂಪಿಸಿದೆ. ಶ್ರೀಗಳ ಭಾರವನ್ನು ಕೊಂಚವಾದರೂ ಕಡಿಮೆ ಮಾಡಬೇಕೆನ್ನುವ ಅವರ ಆಶಯ ಅಪೇಕ್ಷಣೀಯ. ಕಬೀರಾನಂದಾಶ್ರಮದ ಶ್ರೀ ಶಿವಲಿಂಗಾನಂದ ಸ್ವಾಮಿಗಳೂ ಶ್ರೀಗಳ ಕನಸನ್ನು ನನಸು ಮಾಡಲು ಪ್ರಯತ್ನಿಸುತ್ತಿದ್ದಾರೆ. ಕಸಾಯಿಖಾನೆಗೆ ಹಸುಗಳನ್ನು ನೀಡದಂತೆ ಮನವಿ ಮಾಡಿದ್ದಾರೆ, ಅದನ್ನು ತಡೆಯಲು ಯುವಕರ ಪಡೆಯನ್ನೂ ಕಟ್ಟಿದ್ದಾರೆ. ಇದರಿಂದ ಸಂಘರ್ಷಗಳೂ ಆಗುತ್ತಿವೆ. "ಜನರಿಗೆ ವಿವೇಕ ಬರುವವರೆಗೂ ಯಾವುದೇ ಕಾಯ್ದೆ, ಕಾನೂನು, ಒತ್ತಡಗಳು ಏನೂ ಮಾಡಲಾರವು. ಹಸುಗಳನ್ನು ರಕ್ಷಿಸಬೇಕಾದ ಹಿಂದೂಗಳೇ ಹಸುಗಳನ್ನು ಕೊಲ್ಲಲು ನೀಡುತ್ತಿದ್ದಾರೆ. ಇದೇ ವಿಪರ್ಯಾಸ" ಎಂದು ಅವರು ವಿಷಾದಿಸುತ್ತಿದ್ದಾರೆ. "ಸ್ವಾಮೀಜಿ, ಹಿಂದೂ ಜಾಗ್ರತ ಪ್ರಜ್ಞೆಯೇ ಗೋಶಾಲೆಯ ಆರಂಭಕ್ಕೆ ಕಾರಣ ಅಲ್ಲವೆ?" ಎಂದು ಕೇಳಿದರೆ, "ಇರಬಹುದು. ಹಿಂದುಗಳಷ್ಟೇ ಅಲ್ಲ, ಎಲ್ಲ ಧರ್ಮೀಯರೂ ಇದಕ್ಕೆ ಮುಂದಾಗಬೇಕು. ಅದಕ್ಕೆ ಉಳಿದ ಧರ್ಮೀಯರಲ್ಲೂ ಇದೇ ನಮ್ಮ ಪ್ರಾರ್ಥನೆ" ಎನ್ನುತ್ತಾರೆ.

ಆಶಯ, ಕನಸು ಮತ್ತು ಮಹತ್ವಾಕಾಂಕ್ಷೆಗಳಿಂದ ಆರಂಭವಾಗಿರುವ ಈ ಗೋಶಾಲೆಯ ಅಭೀಪ್ಸೆಗಳೆಲ್ಲ ಈಡೇರಿದರೆ ಇದು ಕೇವಲ ಗೋಶಾಲೆಯಾಗಿ ಮಾತ್ರ ಉಳಿಯುವುದಿಲ್ಲ. ಗೋ ಆಲಯವಾಗಿ ರೂಪಾಂತರ ಹೊಂದೀತು.

**–ಡಾ. ಲೋಕೇಶ ಅಗಸನಕಟ್ಟೆ**



## ಮಾಸದ ಗೋವು

# ಸಾಹಿವಾಲ್ – ಉಭಯ ಕುಶಲೋಪರಿ ಸಾಂಪ್ರತ?

ಪ್ರೀಯ ಕೌಲೀ,

ಕ್ಷೇಮ ತಾನೆ? ಭಾರತದಲ್ಲೀಗ ಕಡು ಬಿಸಿಲು. ಅಲ್ಲವೆ? ಬಹುಶಃ ವೈಶಾಖದ ಬಿಸಿಲ ಬಾದೆಯಿಂದ ನಿನ್ನ ಗೆಳೆಯರೆಲ್ಲ ಮೇಲುಸಿರು ತೆಗೆಯುತ್ತ ನಿಂತಿರುವಾಗ ನೀನು ಮೊಣಕಾಲುದ್ದದ ಬಾಲವನ್ನ ನೆಪ ಮಾತ್ರಕ್ಕೆ ಬೀಸುತ್ತ ಹಾಯಾಗಿ ಪತ್ರ ಓದುತ್ತ ತಣ್ಣಗೆ ನಿಂತಿದ್ದಿ ಅಲ್ಲವೆ?

ಹೌದು ಮಗಳೆ, ಪರಶಿವನ ಅನುಗ್ರಹ. ನಾವೆಂತಹ ಅತ್ಯುತ್ತಮ ಕುಲದಲ್ಲಿ ಹುಟ್ಟಿದೆವು? ಎಂತಹ ಬಿಸಿಲಿಗೂ ದೇಹದ ತಾಪಮಾನದಲ್ಲಿ ವ್ಯತ್ಯಯವಾಗದೆ ಉಳಿಸುವ ವಿಶೇಷ ಚರ್ಮ ಹೊಂದಿರುವ ಉತ್ಕೃಷ್ಟ ಕುಲ ನಮ್ಮದು.

ನಮ್ಮ ಜಾತಿಯ ಬಗ್ಗೆ ಅಲ್ಲಿರುವ ನಿನ್ನ ಹಿರಿಯರು ಅದೆಷ್ಟು ಹೇಳಿದರೂ ನಿನ್ನ ಕೀಳರಿಮೆ ಹೋಗುತ್ತಿಲ್ಲವೆಂದು ನಿನ್ನಮ್ಮ ಹೇಳುತ್ತಿದ್ದಳು. ನೀನಾದ್ರೂ ನಾಕು ಮಾತು ಹೇಳು. ಬ್ರೌನೀ ಅಂತ ಅವಳದ್ದು ಒಂದೆ 'ಗೋಗರೆತ'. ಭಾರತದಲ್ಲಿ ಮೇವುಂಡ ಮೇಲೆ ಭಾರತೀಯರ ಗುಣ ಬರದೆ ಹೋದೀತೆ ಅಂತ ನಾನು ಹೇಳಿದ್ದು ತಮಾಷೆಗೆ ಅಷ್ಟೆ.

ಮಗು, ನಿನ್ನ ಕೀಳರಿಮೆ ತೀರ ಅರ್ಥಹೀನ. ಬಲುದೂರದ ಆಸ್ಟ್ರೇಲಿಯಾದ ಬ್ರಿಸ್ಬೇನ್‌ನ ವಾತಾನುಕೂಲಿ ಕೊಟ್ಟಿಗೆಯಿಂದ ನಾನು ಹೀಗೆ ಹೇಳುವಾಗ ನಿನಗೆ ಇದು ಬರಿ ಒಣ ಉಪದೇಶವಾಗಿ ಅನ್ನಿಸಬಹುದು. ಆದರೆ ಇದನ್ನು ಓದುತ್ತ ಹೋದಂತೆ ನಿನಗದು ದೂರವಾದರೆ ಪತ್ರ ಧನ್ಯ.

ನಮ್ಮದು ಭಾರತೀಯ ಗೋಪರಂಪರೆಯಲ್ಲಿ ಅತ್ಯುತ್ಕೃಷ್ಟ ಹಾಲಿನ ತಳಿ ಎನ್ನಿಸಿದ ಸಾಹಿವಾಲ್ ಎಂಬ ಜಾತಿ. ನಮ್ಮ ಅಜ್ಜನ ಮುತ್ತಜ್ಜನ ಅಜ್ಜ ಈಗಿನ ಪಾಕಿಸ್ತಾನದ (ಆಗ ಭಾರತವೇ ಆಗಿತ್ತು) ಸಾಹಿವಾಲ್ ನಗರದವರು. ಅಲ್ಲಿ ಜಂಗ್ಲಿಗಳು ಎಂಬ ಜನರು ನಮ್ಮನ್ನು ದೊಡ್ಡ ಸಂಖ್ಯೆಯಲ್ಲಿ ಸಾಕುತ್ತಿದ್ದರಂತೆ. ಎಂತಹ ಬಿಸಿಲಿಗೂ ಜಗ್ಗದ ನಮ್ಮ ದೇಹ ಪ್ರಕೃತಿ ನಮ್ಮನ್ನು ಬೇಗ ಜನಪ್ರಿಯರನ್ನಾಗಿಸಿ ಅಲ್ಲಿಂದ ಪಂಜಾಬ್, ಉತ್ತರಾಂಚಲ ದಾಟಿಸಿ ಈಗ, ನಾವಿಲ್ಲದ ತಾವೇ ಭಾರತದಲ್ಲಿಲ್ಲ ಎನ್ನುವಂತಾಯಿತು. ಬರೀ ಅದೊಂದೆ ಕಾರಣವಲ್ಲ, ನಮ್ಮ ರೋಗ ನಿರೋಧಕತೆ, ಅತ್ಯುತ್ತಮ ಹಾಲು ಉತ್ಪಾದಕತೆ ಎಲ್ಲವು ನಮ್ಮನ್ನು ಸರ್ವವ್ಯಾಪಿಯನ್ನಾಗಿಸಿದವು ಅನ್ನು.

ನಮ್ಮ ಬಗ್ಗೆ ಯಾರದ್ರೂ ಕೇಳಿದ್ರೆ ಪೆಪ್ಪೆಪ್ಪೆ ಬೆಬ್ಬೆಬ್ಬೆ ಅಂತ ಅನ್ನಬಾರದಲ್ಲ ಅಂತ ಒಂದಿಷ್ಟು ಹೇಳುತ್ತೇನೆ ಕೇಳು.

ನಮ್ಮ ಜಾತಿಯವರೆಲ್ಲ ನೀನೆ ನೋಡಿದ ಹಾಗೆ ಕೆಂಪು ಅಥವಾ ಊದು ಬಣ್ಣ. (ನನ್ನ ಅಚ್ಚ ಊದಾ ಬಣ್ಣ ನೋಡಿಯೆ ನನಗೆ ಬ್ರೌನಿ ಅಂತ ನಮ್ಮ ಒಡೆಯ ಕರೆದ ಅಂತ ನಮ್ಮಮ್ಮ ಮುದ್ದು ಮಾಡುತ್ತಾ ಹೇಳುತ್ತಿರುತ್ತಾಳೆ). ೩೫೦ ಕೆ.ಜಿ ತೂಗುವ ನಮ್ಮನ್ನು ಮಧ್ಯಮ ಗಾತ್ರ ಗೋವುಗಳಾಗಿ ವರ್ಗೀಕರಿಸುತ್ತಾರೆ.

ಮೊದಲ ಕರು ಈಯುವುದು ಸಾಮಾನ್ಯವಾಗಿ ೩೫ರಿಂದ ೪೦ ತಿಂಗಳಿಗೆ. ನಾಚಬೇಡ, ಮುಂದೆ ಓದು. ನಂತರ ಸಾಮಾನ್ಯವಾಗಿ ೪೦೦–೪೨೫ ದಿನಗಳ ಅವಧಿ ಮುಂದಿನ ಕರುವಿಗೆ. ಹೀಗೇ ಸಾಗುತ್ತ ೧೦–೧೨ ಕರು ಒಂದು ಜೀವಮಾನಕ್ಕೆ. ಅಗಲ ಕಿವಿಗಳು, ಉದ್ದ ಬಾಲ, ಹಿಂಚಾಚಿರುವ ಕೋಡುಗಳು. ಬೇಡ ಬಿಡು. ಇವೆಲ್ಲ ಗೊತ್ತಿದೆ ಬಿಡು ಚಿಕ್ಕಮ್ಮ ಅಂತಿಯೇನೊ.

ಇದು ಬರಿ ನಿನಗೆ ಹೇಳಿದ್ದಲ್ಲ ಮಗಳೆ; ಅದು ನನ್ನ ಸ್ವಗತ ಕೂಡ. ತವರಿನ ನೆನಪುಗಳ ನೇವರಿಕೆ ಕೂಡ. ೧೯೫೦ರಲ್ಲಿ ನಿನ್ನ ಮುತ್ತಜ್ಜಿಯ ಅಜ್ಜಿಯನ್ನು ಅವಳೊಂದಿಗೆ ಇನ್ನೂ ನೂರಾರು ಗೋವುಗಳನ್ನು ಭಾರತಕ್ಕೆ ಬಂದಿದ್ದ ನ್ಯೂಗುಯಿನ್‌ನಾದ ಪ್ರವಾಸಿಗರು, ಸಂಶೋಧಕರು ನೋಡಿ ಮೆಚ್ಚಿ ಅಲ್ಲಿಗೆ ಕರತಂದು ಅಲ್ಲೆಲ್ಲ ನಾವು ಫೇಮಸ್ ಆಗಿ ನಂತರ ಇಲ್ಲಿ ಆಸ್ಟ್ರೇಲಿಯಕ್ಕೆ ರವಾನೆಯಾಗಿ ಬ್ರಿಸ್ಬೇನ್‌ನ ಹವಾನಿಯಂತ್ರಿತ ಕೊಟ್ಟಿಗೆಯಲ್ಲಿ ನಾನು ಹುಟ್ಟುವಾಗ ನಮ್ಮ ವಿಶ್ವ ಪ್ರವಾಸಕ್ಕೆ ಬರೊಬ್ಬರಿ ೫೦ ವರ್ಷ.

ಆಸ್ಟ್ರೇಲಿಯಕ್ಕೆ ಬಂದಾಗ ನಾವು ಹೈನುಗಾರಿಕೆ, ಮತ್ತು ಉಳುಮೆಗೆ ಬಳಸಲ್ಪಡುತ್ತಿದ್ದೆವಾದರೂ ನಂತರ ನಮ್ಮನ್ನು ಉತ್ತಮ ಹಾಲಿನ ತಳಿಯಾಗಿ ಅಭಿವೃದ್ಧಿಪಡಿಸಿದರು. ನಮ್ಮ ಉಪತಳಿಗಳಾದ Australian milking Zebu, Australian friesian sahiwal ಜಗತ್ಪ್ರಸಿದ್ಧ. ಕೀನ್ಯಾ ದೇಶದಲ್ಲಂತೂ 'ಸಾಹಿವಾಲ್' ಮನೆಮಾತು. ನಾವಿಲ್ಲಿ ಬಂದು ೫೦ ವರ್ಷಗಳೆ ಕಳೆದದ್ದರಿಂದ ನಮ್ಮ ದೇಹದಲ್ಲಿ ಸಣ್ಣ ಪುಟ್ಟ ಬದಲಾವಣೆಗಳಾಗಿವೆ. ಹಾಗಾಗಿ ಅಲ್ಲಿ ಇಲ್ಲೆ ನಮ್ಮ ಜಾತಿಯ ಬಗ್ಗೆ ಕೇಳಿದ್ದನ್ನ ನೆನಪು ಮಾಡಿಕೊಳ್ಳುತ್ತ ಭಾರತದ ಪುಣ್ಯಭೂಮಿಯ ಬಗ್ಗೆ ಧ್ಯಾನಿಸುತ್ತ... ಬಿಡು; ವಿಷಯ ಎಲ್ಲೆಲ್ಲೊ ಹೋಯಿತು. ಹೀಗಾಗಿ ವಿಶ್ವ ಪ್ರಸಿದ್ಧಿಯಾಗಿರುವ ತಳಿಯೊಂದರ ಕೂಸೆಂದು ಖುಶಿ ಪಡಬೇಕೆ ವಿನಹ..

ಒಮ್ಮೆ ಹತ್ತಿರದಿಂದ ಗಮನಿಸು, ನಿನ್ನ ಕೀಳರಿಮೆಗೆ ಕಾರಣವಾಗಿರುವ ಆ ನಿನ್ನ ಜೆರ್ಸಿ ಗೆಳೆಯರನ್ನು.. ಹುಳ ಹುಪ್ಪಟೆಗಳೆಲ್ಲ ಮೈ ಹತ್ತಿಸಿಕೊಂಡು ತರ ತರ ರೋಗಗಳಿಂದ ಸದಾ ಪ್ರಯಾಸಪಡುತ್ತ ಸಾಕಿರುವವರಿಗೆ ಸಾಕೋಸಾಕೆನ್ನಿಸುವ ಅವುಗಳ ತೊಂದರೆ ನಿನಗೆಂದಾದರೂ ಕಾಡಿದ್ದಿದೆಯೆ? ಮೈಯಲ್ಲಿ ಸ್ರವಿಸುವ ವಿಶೇಷ ದ್ರವದಿಂದ ಹುಳಹುಪ್ಪಟೆ ಕ್ರಿಮಿಕೀಟಗಳನ್ನು ಮಾರುದೂರ ಓಡಿಸುವ ಈ ಅದ್ಭುತ ಕೊಡುಗೆಗಾಗಿ ಶಿವನಿಗೆ ಅದೇಷ್ಟೂ ವಂದಿಸಿದರೂ ಕಡಿಮೆ ಮಗಳೆ.. ಅವರ ಹಾಗೆ ಅರ್ದ ಕೌಳಿಗೆ ಹಾಲು ಕರೆಯುತ್ತಲೆ ಕಾಲೆತ್ತಿ 'ಚಾಳಿ' ಮಾಡುವ ಕೃಪಣತೆ ನಮ್ಮ ಜಾತಿ ದನಗಳಲ್ಲೆಂದಾದರೂ ಕಂಡಿದ್ದೀಯಾ? ಕಂಡಿದ್ದರೆ ಅದ್ಯಾವುದೊ ಮಿಶ್ರತಳಿ ಎಂದು ತಿಳಿ. ಹೇಳು; ಯಾರಿಗಿದೆ ನಿನ್ನ ಸರಿಸಾಟಿಯಾಗಿ ದಿನವಿಡೀ ಉಳುವ ಆ ಅಸೀಮ ಬಲ? ದಿನಕ್ಕೆ ೧೫–೨೦ ಲೀಟರ್ ಹಾಲು ಕೊಡುವ ಅಪರೂಪದ ಶಕ್ತಿ

ಹೊಂದಿದ್ದೂ ನೀನು ಅಳುವುದು ಯಾಕೆ? ಕೊಟ್ಟಿಗೆಯ ತುಂಬ ಆ ವಿದೇಶಿ ವಯ್ಯಾರಿಗಳೇ ತುಂಬಿ ಹೋಗಿ, ಜಾತಿ ಬಾಂಧವರೆ ಇಲ್ಲದೆ ಕಾಡುವ ಒಂಟಿತನದಿಂದಲೆ? ಅಳದಿರು ಮಗು.. ಮುಂದೊಂದು ಕಾಲ ಬಂದೀತು.. ಭಾರತೀಯ ಗೋ ತಳಿಗಳ ಮೆಲುದನಿಯ ಮೆಲುಕು ಭಾರತೀಯತೆಯ ಪುನರುತ್ಥಾನದ ಪ್ರತೀಕವಾಗುವ ಕಾಲ. ತಳಿಸಂಕರದ ಹೆಜ್ಜಾಲವನ್ನು ಮುರಿದು ಭಾರತೀಯ ಗೋವುಗಳು ತಮ್ಮತನ ಮೆರೆಯುವ ಕಾಲ. ಕಟುಕರ ಮನೆ ಕಾಮಧೇನುವಿನ ದೇಗುಲವಾಗುವ ಕಾಲ. ಅದು ದೂರವಿಲ್ಲವೆಂದು ನನ್ನ ಭಾವನೆ.

ಒಡೆಯನ ಪ್ರೀತಿಯ ನೇವರಿಕೆಗಳಿಂದ ಮುದಗೊಳ್ಳುವ ನಿನ್ನ ಬಗ್ಗೆ ನನಗಿರುವ ಹೊಟ್ಟೆಕಿಚ್ಚು, ಹಾಲು ಕರೆಯುವುದರಿಂದ ಹಿಡಿದು ಎಲ್ಲವನ್ನೂ ಯಾಂತ್ರೀಕೃತಗೋಳಿಸಿರುವ ಇಲ್ಲಿಯ ವ್ಯವಸ್ಥೆಯ ಬಗೆಗೆ ನನಗಿರುವ ನೋವು ಇವನ್ನು ಕುರಿತು ಇನ್ನೆಂದಾದರೂ ಬರೆದೇನು. ಅದನ್ನೆಲ್ಲ ಹೇಳಿ ನಿನಗೆ ಬೇಸರ ಮೂಡಿಸಲು ಮನ ಬರುತ್ತಿಲ್ಲ.

ಆರೋಗ್ಯದ ಬಗ್ಗೆ ಕಾಳಜಿ ಇರಲಿ, ದಾರಿಯಲ್ಲಿ ಕಂಡಿದ್ದೆಲ್ಲ ತಿನ್ನಬೇಡ. ಪ್ಲಾಸ್ಟಿಕ್ ಬಗ್ಗೆ ಹುಷಾರು.

ನಿನ್ನ ಚಿಕ್ಕಮ್ಮ,
ಬ್ರೌನಿ
ಬ್ರಿಸ್ಬೇನ್, ಆಸ್ಟ್ರೇಲಿಯ.

**-ಮಧುಕೇಶ ದೊಡ್ಡೇರಿ**



## ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ ೨೭, ೨೦೦೭ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ–ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು ಏಳನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ–ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com